ಇಷ್ಟೆಲ್ಲಾ ವರ್ಷಗಳ ನಂತರ ಪತ್ತೆ ಹಚ್ಚಿ ನನ್ನನ್ನು ಊರಿಗೆ ಕರೆದುಕೊಂಡು ಹೋಗಲು ಅಪ್ಪ ಬಂದಿದ್ದಾರೆ. ಅಮ್ಮನ ತಮ್ಮನನ್ನು ನನ್ನನ್ನು ಮದುವೆಯಾಗಲು ಪುಸಲಾಯಿಸಿ ಕರೆದುಕೊಂಡು ಬಂದಿದ್ದಾರೆ. ಅಮ್ಮ ಬಿಲ್ಕುಲ್ ಒಪ್ಪುತ್ತಿಲ್ಲ. ನನಗೂ ಇಷ್ಟವಿಲ್ಲ. ಅವರು ಇನ್ನೂ ಎರಡು ದಿನ ಇರ್ತಾರಂತೆ. ಒಂದೆರಡು ದಿನ ಫ್ಯಾಕ್ಟರಿಗೆ ರಜ ಹಾಕುತ್ತಿದ್ದೇನೆ...'' ಎಂದು ಬ್ಯಾಗಿನಿಂದ ಒಂದು ಮುದ್ದಾದ ಗೊಂಬೆಯನ್ನು ತೆಗೆದು, ''ಇದು ನಮ್ಮ ಫ್ಯಾಕ್ಟರಿಯಲ್ಲಿ ತಯಾರಾದದ್ದು. ನಿಮಗೆ ಅಂತ ತಂದೆ, ನೀವು ಮೊನ್ನೆ ನನ್ನ ಹತ್ತಿರ ಆಟೊ ಚಾರ್ಜ್ ಕೊಡಿಸಲಿಲ್ಲವಲ್ಲ ಅದಕ್ಕೆ ಬದಲು ಗಿಫ್ಟ್ ಆಗಿ...'' ಎಂದು ಕೊಟ್ಟಿದ್ದಳು. ಅದೊಂದು ಹುಡುಗ, ಹುಡುಗಿಯನ್ನು ಒಟ್ಟಿಗೆ ಎರಕಹೊಯ್ದ ಗೊಂಬೆಯಾಗಿತ್ತು. ಗೊಂಬೆಯನ್ನು ಅಮುಕಿದರೆ ಹುಡುಗ, ಹುಡುಗಿ ಇಬ್ಬರೂ ನಕ್ಕಂತೆ ಸ್ವರ ಹೊರಡುತ್ತಿತ್ತು. ಅಷ್ಟೊತ್ತಿಗೆ ಅವಳ ಫ್ಯಾಕ್ಟರಿ ಬಂದಿತ್ತು. ಅವಳು ಇಳಿದಾಗ, ''ಆನಂದಿ ನಿಮ್ಮನ್ನು ಇಷ್ಟಪಟ್ಟಿದ್ದೇನೆ, ನೀವು ಒಪ್ಪಿದರೆ ಊರಿನಲ್ಲಿ ಅಪ್ಪ ಅಮ್ಮನನ್ನು ಒಪ್ಪಿಸಿ ಮದುವೆಯಾಗುತ್ತೇನೆ...'' ಎಂದು ಹೇಳಬೇಕೆಂದುಕೊಂಡವನಿಗೆ ಏಕೋ ಮಾತುಗಳು ಹೊರಡದೆ ಗಂಟಲಲ್ಲೆ ಉಳಿದುಬಿಟ್ಟವು. ಆಟೊ ಇಳಿದು ಅವಳು ನಡೆದುಹೋದಂತೆ ರಾಮ್ ಲಾಲನ ಹೃದಯವೇಕೊ ಖಾಲಿ ಖಾಲಿಯಾದಂತೆ ಅನ್ನಿಸತೊಡಗಿತ್ತು.

ಅಂದು ಫ್ಯಾಕ್ಟರಿಯಲ್ಲಿ ಅನ್ಯಮನಸ್ಕನಾಗಿದ್ದ ರಾಮ್ ಲಾಲನಿಗೆ ಇನ್ನೊಂದು ಬೇಸರದ ಸಂಗತಿ ಕೇಳಿಬಂದಿತ್ತು. ಸೂಪರ್ ವೈಸರ್ ಧರ್ಮ ಪಾಲರಿಂದ ಹಿಡಿದು ಎಲ್ಲಾ ಸಹ ಕಾರ್ಮಿಕರು ಯಾವುದೋ ಗಹನವಾದ ಚರ್ಚೆಯಲ್ಲಿ ತೊಡಗಿದ್ದರು. ಇಡೀ ಜಗತ್ತಿಗೆ ಅದ್ಯಾವುದೋ ಭಯಾನಕವಾದ ರೋಗ ಹರಡುತ್ತಿದೆಯಂತೆ. ಅಮೆರಿಕ, ಯೂರೋಪ್, ಚೀನಾ ಮುಂತಾದ ವಿದೇಶಗಳಲ್ಲಿ ಈಗಾಗಲೇ ಈ ರೋಗ ಸಾವಿರಾರು ಜನರನ್ನು ಬಲಿ ತೆಗೆದುಕೊಂಡಿದೆಯಂತೆ. ದಿಲ್ಲಿಯಲ್ಲಿಯೂ ಈ ರೋಗ ಅನೇಕ ಜನರಲ್ಲಿ ಕಾಣಿಸಿಕೊಂಡಿದೆಯಂತೆ. ಈ ರೋಗಕ್ಕೆ ಪ್ರಪಂಚದಲ್ಲಿ ಇನ್ನೂ ಯಾವುದೇ ಔಷಧಿಯನ್ನು ಕಂಡುಹಿಡಿಯಲಾಗಿಲ್ಲವಂತೆ. ಚೀನಾ ಮುಂತಾದ ರಾಷ್ಟ್ರಗಳಲ್ಲಿ ವ್ಯವಹಾರ, ವಹಿವಾಟುಗಳನ್ನು ಬಂದ್ ಮಾಡಲಾಗಿದೆಯಂತೆ. ಕೆಮ್ಮು, ನೆಗಡಿ, ಜ್ವರ ಬಂದು ಉಸಿರಾಟದ ತೀವ್ರ ತೊಂದರೆಯಾಗಿ ಜನ ವಿಲವಿಲ ಒದ್ದಾಡಿ ಸಾಯುತ್ತಾರಂತೆ. ಒಬ್ಬರಿಂದ ಅದು ಸಾವಿರಾರು ಜನರಿಗೆ ಹಬ್ಬಬಲ್ಲದಂತೆ. ಜನ ಹೊರಗಡೆ ತಿರುಗಾಡದೆ ಮನೆಗಳಲ್ಲೇ ಉಳಿದುಕೊಳ್ಳಬೇಕಂತೆ. ನಮ್ಮ ದೇಶದಲ್ಲೂ ಅದು ವ್ಯಾಪಕವಾಗಿ ಹರಡಬಹುದಂತೆ. ಹೆಚ್ಚಾಗಿ ಅರವತ್ತು ವರ್ಷದ ಮೇಲ್ಪಟ್ಟವರಿಗೆ ಈ ರೋಗ ಬೇಗ ತಗುಲುತ್ತದಂತೆ. ಮತ್ತೆ ಕೆಲವರು ನಮ್ಮ ದೇಶಕ್ಕೆ ಆ ಕಾಯಿಲೆ ಏನೂ ಮಾಡಲಾರದು, ನಮ್ಮದು ಕೋಟಿ ದೇವರುಗಳ ನಾಡು. ಅಲ್ಲದೆ ನಮ್ಮ ಭೌಗೋಳಿಕ ವಾತಾವರಣ ಹಾಗೂ ನಾವು ತಿನ್ನುವ ಆಹಾರ ಪದಾರ್ಥಗಳಿಗೆ ಅಂಥ ರೋಗಗಳನ್ನು ತಡೆ ಹಿಡಿಯುವ ಶಕ್ತಿ ಇದೆ... ಮುಂತಾಗಿ. ಈ ಸುದ್ದಿ ಫ್ಯಾಕ್ಟರಿಯ ಎಲ್ಲರಲ್ಲೂ ಭಯಭೀತಿಯನ್ನು ಹುಟ್ಟುಹಾಕಿದಂತೆ ರಾಮ್ ಲಾಲನಲ್ಲೂ ಅವ್ಯಕ್ತ ತಳಮಳವನ್ನು ಉಂಟುಮಾಡಿತ್ತು. ಆನಂದಿ ಹೇಳಿದಂತೆ ಇದಾದ ಎರಡು ದಿನಗಳು ಅವಳು ಕಾಣಿಸಿರಲಿಲ್ಲ. ಮನೆಯಲ್ಲಿ ಏನು ಜಗಳವಾಗಿರುವುದೋ ಏನೋ. ಅವಳನ್ನು ಅವಳ ತಂದೆ ಮತ್ತು ಮಾವ ಊರಿಗೆ ಕರೆದುಕೊಂಡು ಹೋಗಬಹುದೇ. ಇಲ್ಲ ಇಲ್ಲ ಅವಳೇ ಹೇಳಿದಂತೆ ಖಂಡಿತಾ ಅವಳು ಹೋಗಿರಲಾರಳು. ಅವಳಿಗೂ ತನ್ನ ಮೇಲೆ ಮನಸ್ಸಿದೆ. ಇಲ್ಲದಿದ್ದಲ್ಲಿ ಮುದ್ದಾದ ಜೋಡಿ ಗೊಂಬೆಯನ್ನು ತನಗೇಕೆ ಕೊಡುತ್ತಾಳೆ. ನಾಳೆ ಭಾನುವಾರ ಫ್ಯಾಕ್ಟರಿಗೆ ರಜ, ನಾಡಿದ್ದು ಖಂಡಿತಾ ಬಂದೇ ಬರುತ್ತಾಳೆ. ಮುಂತಾದ ಆಲೋಚನೆಗಳು ರಾಮ್ ಲಾಲನ ಮನಸ್ಸಿನಲ್ಲಿ ದಾಳಿ ಮಾಡಿದ್ದವು. ಹೆದ್ದಾರಿಯಲ್ಲಿ ಹೋಗುತ್ತಿದ್ದ ವಾಹನಗಳ ಸದ್ದು ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಇಷ್ಟು ದಿನಗಳಲ್ಲಿ ಆ ಶಬ್ದ ತನ್ನ ಕಿವಿಗೆ ಬಿದ್ದಿದ್ದೆ ಇಲ್ಲ. ಕಡೆಗೂ ನಿದ್ರಾದೇವಿ ಹರಸಾಹಸ ಮಾಡಿ ಅವನನ್ನು ತನ್ನ ವಶ ಮಾಡಿಕೊಂಡಿದ್ದಳು.